ಐಶಾರಾಮಿ ರೈಲು ಪ್ರವಾಸ ಪ್ಯಾಕೇಜ್‌ಗಳು, ಮೈಸೂರು ಹಾಗೂ ಹೈದ್ರಾಬಾದ್ ನಗರಗಳಿಂದ ಸುವ್ಯವಸ್ಥಿತ ಐಶಾರಾಮಿ ಬಸ್ ಪ್ರವಾಸ ಪ್ಯಾಕೇಜ್‌ಗಳ ಆಯೋಜನೆ, ಪರಿಸರ ಮತ್ತು ಸಾಹಸ ಪ್ರವಾಸೋದ್ಯಮ ಚಟುವಟಿಕೆಗಳ ಆಯೋಜನೆ ಹಾಗೂ ಮುಂತಾದ ಕಾರ್ಯಕ್ರಮಗಳು

ಈ) ಕೇಂದ್ರ ಸರ್ಕಾರವು ಜಾರಿ ತಂದಿರುವ ಇ-ವೀಸಾ ಸೌಲಭ್ಯದಿಂದಾಗಿ 76 ದೇಶಗಳ ವಿದೇಶಿ ಪ್ರವಾಸಿಗರು (ವೀಸಾ ಆನ್ ಅರೈವಲ್ ವ್ಯವಸ್ಥೆ) ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯದ ಪ್ರವಾಸಿತಾಣಗಳಿಗೆ ಭೇಟಿ ನೀಡುವರು.

ಪ್ರವಾಸೋದ್ಯಮ ಇಲಾಖೆಯಿಂದ ಕಾಮಗಾರಿಗಳು

1412(924); ಡಾ॥ ರಫೀಕ್ ಅಹ್ಮದ್ ಎಸ್. (ತುಮಕೂರು ನಗರ)

ಅ) ತುಮಕೂರು ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರವಾಸೋದ್ಯಮ ಇಲಾಖೆಯಡಿ ಬರುವ ಸ್ಥಳಗಳು ಯಾವುದು;

ಆ) ಈ ಸ್ಥಳಗಳಲ್ಲಿ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ;

ಇ) ಸದರಿ ಸ್ಥಳಗಳ ಅಭಿವೃದ್ಧಿಗಾಗಿ ಸರ್ಕಾರ ವೆಚ್ಚ ಮಾಡಿರುವ ಅನುದಾನವೆಷ್ಟು; (ವಿವರ ನೀಡುವುದು)?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) ತುಮಕೂರು ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಕೆಳಕಂಡ ಪ್ರವಾಸಿ ತಾಣಗಳನ್ನು ಪ್ರವಾಸೋದ್ಯಮ ಇಲಾಖೆಯಿಂದ ಗುರುತಿಸಲಾಗಿದೆ.

ಸಿದ್ಧಗಂಗ, ಕೈದಾಳ, ದೇವರಾಯನದುರ್ಗ

ಆ) ಪ್ರವಾಸೋದ್ಯಮ ಇಲಾಖೆಯಿಂದ ಗುರುತಿಸಿರುವ ಪ್ರವಾಸಿ ತಾಣಗಳು ಹಾಗೂ ಇತರೆ ಸ್ಥಳಗಳಲ್ಲಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳ ವಿವರ ಕೆಳಗಿನಂತಿದೆ.

ಕ್ರ.ಸಂ.	ಕಾಮಗಾರಿ ಹೆಸರು	ಅಂದಾಜು ಮೊತ್ತ	ಬಿಡುಗಡೆ ಮಾಡಿರುವ ಮೊತ್ತ
ತುಮಕೂರು ತಾಲ್ಲೂಕು			
1	ದೇವರಾಯನದುರ್ಗದಲ್ಲಿ ಯಾತ್ರಿನಿವಾಸ ನಿರ್ಮಾಣ (ಬಂಡವಾಳ ವೆಚ್ಚಗಳು) 2008–09	99.69	99.69
2	ದೇವರಾಯನದುರ್ಗದ ಬಳಿ ಹೆಚ್ಚುವರಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ (ಬಂಡವಾಳ ವೆಚ್ಚಗಳು) 2012–13	100.00	100.00
3	ಕೈದಾಳ ಪ್ರದೇಶದಲ್ಲಿ ಉದ್ಯಾನವನ, ಮತ್ತು ಶೌಚಾಲಯಗಳ ಅಭಿವೃದ್ಧಿ (ಬಂಡವಾಳ ವೆಚ್ಚಗಳು) 2012–13	75.00	75.00
4	ಊರ್ಡಿಗೆರೆ ಗ್ರಾಮದಿಂದ ಎಸ್.ಹೆಚ್.3 (ಕೋಳಾಲ ಎಲೆಕ್ಯಾತನಹಳ್ಳಿ) ಮಾರ್ಗ ಬೈಲಾಂಜನೇಯ ಸ್ವಾಮಿ ದೇವಸ್ಥಾನ ಮುಖಾಂತರ ಸೀತಕಲ್ಲು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ (ನಬಾರ್ಡ್ ಯೋಜನೆ) 2012–13	70.00	70.00
5	ಕೋಳಿಹಳ್ಳಿ ಗ್ರಾಮದ ಶ್ರೀ ಆಂಜನೇಯಸ್ವಾಮಿ ತಿರುಮಲ ದೇವರು ದೇವಸ್ಥಾನಕ್ಕೆ ಸಿಂಗನಹಳ್ಳಿಯಿಂದ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ (ನಬಾರ್ಡ್ ಯೋಜನೆ) 2012–13	50.00	50.00
6	ನಾಗವಲ್ಲಿ–ಹೊನ್ನುಡಿಕೆ–ಶಿವಗಂಗೆ ರಸ್ತೆಯ ಮಸ್ಕಲ್ ಗ್ರಾಮದಿಂದ ಶಿವಗಂಗೆವರೆಗೆ ಹೋಗುವ ಕೂಡುರಸ್ತೆ ಅಭಿವೃದ್ಧಿ (ನಬಾರ್ಡ್ ಯೋಜನೆ) 2011–12	300.00	300.00
	ಒಟ್ಟು	**694.69**	**694.69**

ಇ) "ಆ" ನಲ್ಲಿ ಉತ್ತರಿಸಿರುವಂತೆ.